

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ರಂಗ ಜಂಗಮ ಸಿ.ಜಿ.ಕೆ

ಮೂರಕ್ಷರಗಳ ಹೆಸರಿನ ಸಿ.ಜಿ.ಕೆ ಕನ್ನಡ ರಂಗಭೂಮಿಯ ಮುಕ್ಕಣ್ಣ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಅವರು ಸದಾ ಇರುತ್ತಿದ್ದುದು ರಂಗಭೂಮಿಯ ನೇಪಥ್ಯದಲ್ಲಿ. ಪ್ರೇಕ್ಷಕರಿಗೆ ಕಾಣಿಸಿಕೊಳ್ಳದ ರಂಗಕರ್ಮಿಗಳ ಮಧ್ಯೆ. ಅವರು ರಂಗಭೂಮಿಯ ನೇಪಥ್ಯದಿಂದ ಬಾಳಿನ ನೇಪಥ್ಯಕ್ಕೆ ಖಾಯಂ ಆಗಿ ಸರಿದು ಹೋಗಿ ಇದೇ ಜನವರಿ 11 ಕ್ಕೆ ಸರಿಯಾಗಿ ಐದು ವರ್ಷಗಳಾಗುತ್ತವೆ. ಅನಿರೀಕ್ಷಿತವಾಗಿ ಜೊತೆಯಲ್ಲಿ ಗೆಳೆಯ ನಾಗತಿಹಳ್ಳಿ ಚಂದ್ರಶೇಖರ್ ಅವರೊಂದಿಗೆ ಸಿರಿಗೆರೆಗೆ ಬಂದಿದ್ದ ಅವರು ಹಿಂದಿನ ರಾತ್ರಿ ನಮ್ಮೊಂದಿಗೆ ಆತ್ಮೀಯವಾಗಿ ಸುದೀರ್ಘ ಸಂಭಾಷಣೆ ನಡೆಸಿದ್ದರು. ಮುಂಜಾನೆ ತಮ್ಮನ್ನು ಕಾಣದೆ ಬೇಗನೆ ಹೋಗುವುದಾಗಿ ಹೇಳಿ ನಮ್ಮಿಂದ ವಿದಾಯಗೊಂಡು ಮಠದಲ್ಲಿಯೇ ತಂಗಿದ್ದ ಅವರು ಬೆಳಗಿನ ಜಾವ ಸಂಭವಿಸಿದ ತೀವ್ರ ಹೃದಯಾಘಾತದಿಂದ ಕಾಣದ ತಾಣಕ್ಕೆ ತೆರಳಿದ್ದರು.

ಸಿ.ಜಿ.ಕೆ ಎಂಬ ಮೂರಕ್ಷರಗಳಲ್ಲಿ ಎಂಥ ಮೋಡಿ ಇತ್ತೆಂಬುದಕ್ಕೆ ಅವರ ಕಳೇಬರವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಹಿಂಭಾಗದ ಸಂಸ ಬಯಲು ರಂಗ ಮಂದಿರಕ್ಕೆ ಸಿರಿಗೆರೆಯಿಂದ ಕರೆ ತಂದಾಗ ಅಲ್ಲಿ ನೆರೆದಿದ್ದ ಜನಸ್ತೋಮವೇ ಸಾಕ್ಷಿ. ನಾಡಿನ ಹೆಸರಾಂತ ಕಲಾವಿದರು, ಸಾಹಿತಿಗಳು, ರಂಗಭೂಮಿಯ ಒಲವುಳ್ಳ ರಾಜಕೀಯ ಧುರೀಣರು ಅವರ ಅಂತಿಮ ದರ್ಶನಕ್ಕಾಗಿ ಸಾಲುಗಟ್ಟಿ ತುದಿಗಾಲ ಮೇಲೆ ನಿಂತಿದ್ದರು. ಸಿ.ಜಿ.ಕೆ ನಿಕಟವರ್ತಿಗಳಾಗಿದ್ದ ಹಿರಿಯ ಕಿರಿಯ ಕಲಾವಿದರ ಹೃದಯ ಆರ್ದ್ರಗೊಂಡಿತ್ತು, ಕಣ್ಣುಗಳು ತೇವಗೊಂಡಿದ್ದವು. ಧ್ವನಿವರ್ಧಕದಿಂದ ಕೇಳಿ ಬರುತ್ತಿದ್ದ ‘ಸಿ.ಜಿ.ಕೆ ಅಮರ್ ರಹೇ’ ಉದ್ಗಾರ ಸಂಸ ಆವರಣದಲ್ಲಿ ಗೂಂಜಿಡುತ್ತಿತ್ತು!

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಕುಟುಂಬ, ಪರಿವಾರ, ಬಂಧು-ಬಳಗ ಇರುತ್ತದೆ; ರಕ್ತ ಸಂಬಂಧಿಗಳು ಇರುತ್ತಾರೆ. ಅವರಲ್ಲಿ ಯಾರಾದರೂ ಮೃತಪಟ್ಟರೆ ದುಃಖ ಉಮ್ಮಳಿಸಿ ಬರುವುದು ಸಹಜ. ಸಾರ್ವಜನಿಕ ಬದುಕಿನಲ್ಲಿ ರಕ್ತಸಂಬಂಧವಿಲ್ಲದ ವ್ಯಕ್ತಿ ಮರಣ ಹೊಂದಿದಾಗಲೂ ಮಾನವ ಸಹಜವಾದ ಅನುಕಂಪದ ಮಾತುಗಳನ್ನಾಡುವುದು ಉಂಟು. ಗಣ್ಯರಾರಾದರೂ ಮೃತರಾದಾಗ ಪತ್ರಿಕೆಗಳಲ್ಲಿ ವರದಿಯಾಗುವ ‘ಅಶ್ರುತರ್ಪಣ’, ‘ಗಣ್ಯರ ಕಂಬನಿ’, ‘ತುಂಬಲಾರದ ನಷ್ಟ’ ಇತ್ಯಾದಿ ನುಡಿಗಟ್ಟುಗಳು ಕ್ಲೀಷೆಯಾಗಿವೆ. ಕೇವಲ ಶಿಷ್ಟಾಚಾರದ ಮಾತುಗಳಾಗಿವೆ. ಆದರೆ ಸಿ.ಜಿ.ಕೆ ಯವರ ವಿಚಾರಕ್ಕೆ ಬಂದರೆ ಸಂಸ ಬಯಲು ರಂಗಮಂದಿರದ ವೇದಿಕೆಯ ಮೇಲೆ ಕಂಡ ಆ ದೃಶ್ಯ ತುಂಬಾ ವಿಭಿನ್ನವಾಗಿತ್ತು. ಅಲ್ಲಿದ್ದವರೆಲ್ಲರ ಅಂತರಂಗದಲ್ಲಿ ತಮ್ಮ ಕುಟುಂಬದ ಸದಸ್ಯರನ್ನೇ ಕಳೆದುಕೊಂಡ ದುಃಖ ಮಡುಗಟ್ಟಿತ್ತು.

ಸಿ.ಜಿ.ಕೆ ಯವರ ಪಾರ್ಥಿವ ಶರೀರವನ್ನು ಸಿರಿಗೆರೆಯಿಂದ ಬೆಂಗಳೂರಿಗೆ ತೆಗೆದುಕೊಂಡು ಹೋಗುವಾಗ ನಮ್ಮ ಕಾರು ಅವರ ವಾಹನದ ಹಿಂದೆಯೇ ಇತ್ತು. ನಮ್ಮ ಹಿಂದೆ ಸಾಣೇಹಳ್ಳಿ ಶ್ರೀಗಳವರು ಇದ್ದರು. ನಮ್ಮೊಂದಿಗೆ ಸಿ.ಜಿ.ಕೆ ಅವರ ಗೆಳೆಯ ನಾಗತಿಹಳ್ಳಿ ಚಂದ್ರಶೇಖರ್ ಇದ್ದರು. ದಾರಿಯುದ್ದಕ್ಕೂ ನಾಗತಿಹಳ್ಳಿಯವರಿಗೆ ಮೊಬೈಲ್ ಫೋನುಗಳ ಮಹಾಪೂರ. ಆತ್ಮೀಯರಿಂದ ಸಿ.ಜಿ.ಕೆ ಅವರ ಮೊಬೈಲ್ ಫೋನಿಗೂ ಕರೆ! ಮೊಬೈಲ್ ರಿಂಗಣಿಸಿದರೆ ಉಭಯ ಕುಶಲೋಪರಿ ಮಾತುಗಳನ್ನಾಡಲು ಅವರು ಇರಲಿಲ್ಲ! ಭಾರದ ಕೈಗಳಿಂದ ಆತ್ಮೀಯ ಗೆಳೆಯನ ಮೊಬೈಲ್ ಫೋನ್ ಹಿಡಿದು ಮೆಲುದನಿಯಲ್ಲಿ ನಾಗತಿಹಳ್ಳಿಯವರಿಂದಲೇ ಉತ್ತರ. ಆಗ ಒಂದು ವಾರದಿಂದ ಅವರೊಟ್ಟಿಗೇ ಇದ್ದ ನಾಗತಿಹಳ್ಳಿಯವರು ಆತ್ಮೀಯ ಗೆಳೆಯನನ್ನು ಕಳೆದುಕೊಂಡು ತುಂಬಾ ಆಘಾತಗೊಂಡಿದ್ದರು. ‘ನಾನು ಸಿಂಗಪುರಕ್ಕೆ ಹೋಗಿ ಬಂದ ಮೇಲೆ ಸಿರಿಗೆರೆಗೆ ಬರುತ್ತೇನೆ, ಅಣ್ಣಾ! ಎಂದು ಹೇಳಿದೆ, ಆತ ಕೇಳಲಿಲ್ಲ. ಸಿಂಗಪುರಕ್ಕೆ ನಂತರ ಹೋಗು ಎಂದು ಆಗ್ರಹ ಪಡಿಸಿದ, ಬಂದೆ. ಇಲ್ಲಿಯೇ ಪ್ರಾಣ ಬಿಡಬೇಕೆಂಬ ಆಸೆ ಅವನಿಗೆ ಇದ್ದಿರಬೇಕು....’ ಎಂದು ಭಾವಪರವಶರಾದರು. ಅವರ ಕಣ್ಣಿವೆ ಹನಿಗೂಡಿತ್ತು. ದಾರಿಯುದ್ದಕ್ಕೂ ಸಿ.ಜಿ.ಕೆ ಅವರ ವ್ಯಕ್ತಿತ್ವ, ಸಾವು-ಬದುಕು ಇವುಗಳ ಬಗ್ಗೆ ನಾಗತಿಹಳ್ಳಿಯವರು ಮತ್ತು ನಮ್ಮ ಮಧ್ಯೆ ಸಂಭಾಷಣೆ ನಡೆಯುತ್ತಾ ಹೋಯಿತು.

ಸಿ.ಜಿ.ಕೆ ಬುದ್ಧಿಜೀವಿಗಳಲ್ಲಿ ಬುದ್ಧಿಜೀವಿಗಳು; ಭಾವಜೀವಿಗಳಲ್ಲಿ ಭಾವಜೀವಿಗಳು. ಅವರಲ್ಲಿ ನಾವು ಕಂಡದ್ದು ಬುದ್ಧಿಯ ಪ್ರಖರತೆ ಹಾಗೂ ಹೃದಯದ ಭಾವತೀವ್ರತೆ. ಇವೆರಡೂ ಅವರ ವ್ಯಕ್ತಿತ್ವದಲ್ಲಿ ಒಟ್ಟೊಟ್ಟಿಗೆ ಸಂಲಗ್ನವಾಗಿದ್ದವು. ಅಂಥ ಅಪರೂಪದ ಸಂಗಮವಾಗಿದ್ದವರು ಸಿ.ಜಿ.ಕೆ. ಕಾವ್ಯಪ್ರತಿಭೆಯನ್ನು ಕುರಿತು “ಬುದ್ಧಿ ಭಾವಗಳ ವಿದ್ಯುದಾಲಿಂಗನ” ಎಂದು ಹೇಳುವ ರಾಷ್ಟ್ರಕವಿ ಕುವೆಂಪುರವರ ಅಪರೂಪದ ಮಾತನ್ನು ನಾಗತಿಹಳ್ಳಿಯವರು ಜ್ಞಾಪಿಸಿಕೊಂಡರು. ಅದನ್ನು ಕೇಳಿ ನಮ್ಮ ಆಲೋಚನೆ ಬುದ್ಧಿ ಭಾವಗಳ ಮಧ್ಯೆ ಸಂಚರಿಸತೊಡಗಿತು. ಕೆಲವೊಮ್ಮೆ ಬುದ್ಧಿ ಮತ್ತು ಹೃದಯ ಸಂಘರ್ಷಕ್ಕೆ ಒಳಗಾಗುತ್ತವೆ. ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಬುದ್ಧಿ ಜೀವಿಗಳಲ್ಲಿ ಬುದ್ಧಿಯ ತರ್ಕ ಮತ್ತು ವೈಚಾರಿಕತೆಯ ತೀವ್ರತೆ ಹೆಚ್ಚು. ಕವಿಯಾದವನಲ್ಲಿ ಬುದ್ಧಿಗಿಂತ ಹೃದಯದ ಭಾವನೆಗಳು ಮೇಲುಗೈ ಸಾಧಿಸುತ್ತವೆ. ಕವಿಯ ಭಾವತೀವ್ರತೆಯಲ್ಲಿ ಬುದ್ಧಿ ಸೋಲುತ್ತದೆ. ಕವಿತೆಯನ್ನು ಬರೆಯಲು ಬುದ್ಧಿ ನೆರವಾಗಬಹುದೇ ಹೊರತು ಬುದ್ಧಿಯಿಂದಲೇ ಕವಿತೆ ಹುಟ್ಟುವುದು ಸಾಧ್ಯವಿಲ್ಲ. ‘ಮೂಗ ಕಂಡ ಕನಸಿನಂತಾಯಿತ್ತೆನ್ನ ಭಕ್ತಿ’ ಎಂದು ಬಸವಣ್ಣನವರು ಹೇಳುವಂತೆ ಹೃದಯದ ಭಾವನೆಗಳ ಅಭಿವ್ಯಕ್ತಿಯಲ್ಲಿ ಶಬ್ದ ಸೋಲುತ್ತದೆ, ಮಾತು ಮೂಕವಾಗುತ್ತದೆ. ಕವಿತೆಯು ‘ಬುದ್ಧಿಭಾವಗಳ ವಿದ್ಯುದಾಲಿಂಗನ’ವಾದರೂ ಕವಿಯ ಹೃದಯದಲ್ಲಿರುವ ಭಾವತೀವ್ರತೆಯು ಬುದ್ಧಿಯನ್ನು ಆವರಿಸಿರುತ್ತದೆ. ಆದ್ದರಿಂದ ಕವಿಯ ಕಲ್ಪನೆಯ ಮನೋವ್ಯಾಪಾರ ನಡೆಯುವುದು ಬುದ್ಧಿಯ ಸ್ತರದಲ್ಲಲ್ಲ, ಭಾವನೆಯ ನೆಲೆಯಲ್ಲಿ. ಅದೇ ವಿಮರ್ಶಕನಲ್ಲಿ ಆ ಭಾವವನ್ನು ಬುದ್ಧಿಯು ಪ್ರಧಾನವಾಗಿ ಆವರಿಸಿರುತ್ತದೆ. ಆದುದರಿಂದ ಆತ ಬುದ್ಧಿಯ ನೆಲೆಯಲ್ಲಿ ಆಲೋಚಿಸುತ್ತಾನೆ.

ಸಿ.ಜಿ.ಕೆ ವೃತ್ತಿಯಿಂದ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರಜ್ಞರಾಗಿದ್ದರೂ ಪ್ರವೃತ್ತಿಯಿಂದ ಕಲಾಪ್ರಪಂಚದಲ್ಲಿ ಸಾಂಸ್ಕೃತಿಕ ಭೀಷ್ಮಪಿತಾಮಹರೆನಿಸಿದ್ದರು. 'ಜೇಬಿನಲ್ಲಿ ಚಿಕ್ಕಾಸೂ ಇಲ್ಲದವನೇ ಅರ್ಥಶಾಸ್ತ್ರಜ್ಞ' ಎಂದು ಲೇವಡಿ ಮಾಡುವ ಒಂದು ಗಾದೆ ಮಾತಿದೆ. ಈ ಮಾತು ಸಿ.ಜಿ.ಕೆ ಅವರಿಗೆ ನೂರಕ್ಕೆ ನೂರೂ ಅನ್ವಯಿಸುತ್ತದೆ. ರಂಗಭೂಮಿಯ ನೇಪಥ್ಯದಲ್ಲಿರುವ ಕಲಾವಿದರ ಬಗೆಗೆ ಅವರಿಗೆ ಅಪಾರ ಕಾಳಜಿಯಿದ್ದಿತು. ಬೆಳೆಯುವ ಯುವಕಲಾವಿದರಿಗೆ ಅವರು ಸಹಾಯ ಮಾಡಲು ಹೋಗಿ ತಮ್ಮ ಜೇಬಿನಲ್ಲಿನ ವೇತನದ ಹಣವನ್ನೆಲ್ಲ ಬರಿದು ಮಾಡಿಕೊಳುತ್ತಿದ್ದರು. ಅವರಿಗೆ ಕೌಟುಂಬಿಕ ಮತ್ತು ವೈಯಕ್ತಿಕ ಬದುಕಿನ ಬಗೆಗೆ ಕಿಂಚಿತ್ತೂ ಕಾಳಜಿ ಇರಲಿಲ್ಲ. 'ಊರಿಗೆ ಉಪಕಾರಿ, ಮನೆಗೆ ಮಾರಿ' ಎಂಬ ಗಾದೆಮಾತಿನಂತಿತ್ತು ಅವರ ಕಲಾಜೀವನ.

ಬದುಕಿದ್ದರೆ ನಿವೃತ್ತಿ ಜೀವನವನ್ನು ಸಿರಿಗೆರೆ ಮತ್ತು ಸಾಣೇಹಳ್ಳಿಗಳಲ್ಲಿ ಕಳೆಯುವುದಾಗಿ ಹೇಳುತ್ತಿದ್ದ ಸಿ.ಜಿ.ಕೆ ಕೊನೆಗೂ ಬದುಕುವುದಿಲ್ಲವೆಂಬ ಮುನ್ಸೂಚನೆಯನ್ನು ಪಡೆದು ಪ್ರಾಣ ಬಿಡಲು ಸಿರಿಗೆರೆಯ ನಮ್ಮ ಮಠವನ್ನೇ ಆಯ್ಕೆ ಮಾಡಿಕೊಂಡರೆ? ಅವರ ಕಳೇಬರ ಬೆಂಗಳೂರಿನ ವಿಶ್ವವಿದ್ಯಾನಿಲಯದಲ್ಲಿದ್ದ ಮನೆಯನ್ನು ತಲುಪುತ್ತಿದ್ದಂತೆಯೇ ಮನೆಯೊಳಗಿನಿಂದ ಅವರ ಧರ್ಮಪತ್ನಿಯ ಹೃದಯವಿದ್ರಾವಕ ರೋದನ ಕೇಳಿಬರುತ್ತಿತ್ತು. 'ನನ್ನ ಗಂಡನಿಗೆ ಮಠದಲ್ಲಿ ಇಂಥಾ ಸಾವೆ?' ಎಂದು ಅವರು ಕೇಳಿದರೆ ಏನು ಹೇಳುವುದು ಎಂದು ಬಹುವಾಗಿ ಬಾಧಿಸತೊಡಗಿತು. ಆದರೆ ನಮ್ಮನ್ನು ಕಂಡೊಡನೆಯೇ ಆ ತಾಯಿ ನಮ್ಮ ಪಾದಗಳ ಮೇಲೆ ಧೊಪ್ಪೆಂದು ಬಿದ್ದು ಬಹಳ ಹೊತ್ತು ಮೇಲೇಳಲಿಲ್ಲ. ಅವರಿಗೆ ಸಾಂತ್ವನ ಹೇಳಲು ನಮ್ಮ ಬಳಿ ಯಾವ ಶಬ್ದಗಳೂ ಇರಲಿಲ್ಲ. ಅವರ ಹೃದಯದಲ್ಲಿ ಗಂಡನ ಸಾವು ಮಠದಲ್ಲಿ ಸಂಭವಿಸಿದ್ದರ ಬಗ್ಗೆ ನಮ್ಮ ಮೇಲೆ ಎಳಷ್ಟೂ ಆಕ್ರೋಶವಿರಲಿಲ್ಲ. ಪ್ರತಿಯಾಗಿ ಧನ್ಯತೆಯ ಭಾವವಿತ್ತು.

ಸಿ.ಜಿ.ಕೆ ಮೂಲತಃ ಚಳಕೆರೆ ತಾಲ್ಲೂಕಿನವರಾದರೂ ಹುಟ್ಟಿದ್ದು ಮಂಡ್ಯದಲ್ಲಿ, ಕಾರ್ಯಕ್ಷೇತ್ರ ಮಾಡಿಕೊಂಡದ್ದು ಬೆಂಗಳೂರನ್ನು, ರಂಗಜಂಗಮನಾಗಿ ಸುತ್ತಿದ್ದು ಕರ್ನಾಟಕದ ಮೂಲೆ ಮೂಲೆಯನ್ನು. ಸಿರಿಗೆರೆ ಮತ್ತು ಸಾಣೇಹಳ್ಳಿಗಳೊಂದಿಗೆ ಆತ್ಮೀಯ ಒಡನಾಟವಿಟ್ಟುಕೊಂಡಿದ್ದ ಅವರು ನಮ್ಮ ಮಠಗಳ ರಂಗಚಟುವಟಿಕೆಗಳಿಗೆ ಜೀವಸೆಲೆಯಾದವರು. ಕೊನೆಗೆ ಪ್ರಾಣಬಿಟ್ಟದ್ದು ಸಿರಿಗೆರೆಯ ನಮ್ಮ ಬೃಹನ್ಮಠದಲ್ಲಿ, ಅಂತ್ಯಸಂಸ್ಕಾರ ಹೊಂದಿದ್ದು ನಮ್ಮ ಮಠದ ಶಾಖೆಯಾದ ಸಾಣೇಹಳ್ಳಿಯಲ್ಲಿ. ಮಠಗಳ ಕಡುವಿರೋಧಿಯೆನಿಸಿದ್ದ ಸಿ.ಜಿ.ಕೆ ಕೊನೆಗೂ ಮಠದಲ್ಲಿಯೇ ಮರಣ ಹೊಂದಿ ಮಠದ ಆವರಣದಲ್ಲಿಯೇ ಅವರ ಅಂತ್ಯಸಂಸ್ಕಾರ ನಡೆದದ್ದು ಎಂತಹ ವಿಪರ್ಯಾಸವೆಂದು ಕೆಲವರು ಉದ್ಗಾರವೆಳೆಯಬಹುದು. ಅಥವಾ ಜನರ ಮನಸ್ಸಿನಲ್ಲಿ ಮೌಢ್ಯವನ್ನು ಬಿತ್ತಿ ದೈತ್ಯಶಕ್ತಿಗಳಾಗಿ ಬೆಳೆದು ನಿಂತಿರುವ ಮಠಗಳು ತಮ್ಮ ಕಬಂಧ ಬಾಹುಗಳಿಂದ ಸಿ.ಜಿ.ಕೆ ಯವರಂಥ ಮಠಗಳ ಕಡುವೈರಿಗಳನ್ನೂ ತಮ್ಮ ತೋಳತೆಕ್ಕೆಯೊಳಗೆ 'ಧೃತರಾಷ್ಟ್ರಾಲಿಂಗನ' ಮಾಡಿದವು ಎಂಬ ಕಟುಟೀಕಾ ಪ್ರಹಾರವನ್ನೂ ಮಾಡಬಹುದು. ವಾಸ್ತವವಾಗಿ ಸಿ.ಜಿ.ಕೆ ಮಠಗಳ ವಿರೋಧಿಯಾಗಿರಲಿಲ್ಲ; ಮಠಗಳಲ್ಲಿದ್ದ ಕರ್ಮಠತನದ ವಿರೋಧಿಯಾಗಿದ್ದರು. ಮಠಗಳು ಆಧ್ಯಾತ್ಮಿಕ ಕೇಂದ್ರಗಳಾಗಿರದೆ ಧಾರ್ಮಿಕ ಮೌಢ್ಯ, ಸಾಮಾಜಿಕ ಶೋಷಣೆಯ ಕೇಂದ್ರಗಳಾಗಿದ್ದುದನ್ನು ಕಂಡು ಕೆರಳಿ ಅವುಗಳ ಕಡುವಿರೋಧಿಯಾಗಿದ್ದರು. ಜೀವನಾದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುವ, ಮುನ್ನಡೆಸುವ ಮಠಗಳನ್ನು ಕಂಡು ತಲೆಬಾಗಿದ್ದರು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಎನ್ನುವ ಕಾರಣಕ್ಕಾಗಿಯೇ ಆಡಳಿತ ಪಕ್ಷ ಮಾಡುವ ಒಳ್ಳೆಯ ಕಾರ್ಯಗಳನ್ನೂ ಸಹ ವಿರೋಧಿಸುವ ಜಾಯಮಾನ ಅವರದಾಗಿರಲಿಲ್ಲ.

ನಿತ್ಯ ನಿತ್ಯ ಪರಿಭ್ರಮಣೆ ಸಿ.ಜಿ.ಕೆ ಗೆ ಒಲಿದು ಬಂದ ಜಾಯಮಾನ. ಕಲೆಗಾಗಿ ಬದುಕಿದ ಅವರು ಅದಕ್ಕಾಗಿ ನಿಂತಲ್ಲಿ ನಿಲ್ಲದೆ **ರಂಗಜಂಗಮ**ನಾಗಿ ತಿರುಗಾಡುತ್ತಿದ್ದರು. ಅವರಿಗೆ ದಣಿವೆಂಬುದು ಇರಲಿಲ್ಲ. ಅವರು ತೀರಿಕೊಂಡ ನಂತರವೂ ಅವರ ಪಾರ್ಥಿವ ಶರೀರದ್ದೂ ಅದೇ ಕಥೆಯಾಯಿತು. ಅವರ ಒಡಲಾಳದ ಆ ಆತ್ಮಕ್ಕೆ ಐವತ್ತಾರು ವರ್ಷಗಳ ನಿರಂತರ ಒಡನಾಡಿಯಾಗಿದ್ದ ಪ್ರಭಾವದಿಂದಲೋ ಏನೋ ಅವರ ನಿರ್ಜೀವ ಒಡಲು ಸಿರಿಗೆರೆಯಿಂದ ದಾವಣಗೆರೆಗೆ, ದಾವಣಗೆರೆಯಿಂದ ಮತ್ತೆ ಸಿರಿಗೆರೆಗೆ, ಸಿರಿಗೆರೆಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಚಳಕೆರೆಗೆ, ಚಳಕೆರೆಯಿಂದ ಸಾಣೇಹಳ್ಳಿಗೆ - ಹೀಗೆ ನಿಂತಲ್ಲಿ ನಿಲ್ಲದೆ ಪರಿಭ್ರಮಿಸಿ ಸಾಣೇಹಳ್ಳಿಯ ಶಿವಕುಮಾರ ಬಯಲು ರಂಗಮಂದಿರ ತಲುಪಿತ್ತು.

ಅಂತ್ಯಸಂಸ್ಕಾರದ ಪೂರ್ವದಲ್ಲಿ ಸಾಣೇಹಳ್ಳಿಯ ಶಿವಕುಮಾರ ಬಯಲು ರಂಗಮಂದಿರದ ವೇದಿಕೆಯ ಮೇಲೆ ಅವರ ಕಳೇಬರವನ್ನು ಇರಿಸಿ ಸಂತಾಪ ಸೂಚಕ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಅಂತಿಮ ನಮನವನ್ನು ಸಲ್ಲಿಸಲು ಬಂದಿದ್ದ ಡಿ.ಕೆ. ಚೌಟಾ, ಕಪ್ಪಣ್ಣ, ಕಿ.ರಂ. ನಾಗರಾಜ್, ನಾಗರಾಜ ಮೂರ್ತಿ, ಚಿಂದೋಡಿ ಲೀಲಾ, ಉಮಾಶ್ರೀ ಮೊದಲಾದವರು ಮಾತನಾಡಿ ಸಿ.ಜಿ.ಕೆಯವರ ಗುಣಗಾನ ಮಾಡಿದರು. ಅದೊಂದು ನಿಂದಾಸ್ತುತಿಯೂ ಆಗಿತ್ತು. ಸಿ.ಜಿ.ಕೆಯವರ ಸಿಟ್ಟು ಅವರ ಮೂಗಿನ ತುದಿಯಲ್ಲಿಯೇ ಇತ್ತೆಂದೂ, ಕೈಯಲ್ಲಿದ್ದ ವಾಚನ್ನು ಮುಂದಿರಿಸಿಕೊಂಡು ಕಲಾವಿದರಿಗೆ ನಿರ್ದೇಶಿಸುವಾಗ ನಿರೀಕ್ಷೆಗೆ ಸರಿಯಾಗಿ ಅಭಿನಯಿಸದಿದ್ದರೆ ಸಿಟ್ಟಿನಿಂದ ಆ ವಾಚನ್ನೇ ಅವರತ್ತ ಎಸೆದು ಗದರಿಸುತ್ತಿದ್ದರೆಂದು ಹೇಳಿದರು. ಅವರೊಂದಿಗೆ ಜಗಳ ಮಾಡದವರೇ ಇರಲಿಲ್ಲ. ಜಗಳವಾಡಿದರೂ ಅವರ ಪ್ರೀತಿ ಕಡಿಮೆಯಾಗುತ್ತಿರಲಿಲ್ಲ ಎಂದೂ ಕೆಲವರು ಹೇಳಿದರು. ಎಲ್ಲರೂ ಮಾತನಾಡಿದ ನಂತರ ನಮ್ಮ ಸರದಿ ಬಂತು. ಆ ದಿನ ಎಲ್ಲರಂತೆ ವೇದಿಕೆಯ ಕೆಳಗೆ ಸಹಜವಾಗಿ ನಿಂತೇ ಮಾತನಾಡಿದ್ದು ಹಲವರಿಗೆ ಅಚ್ಚರಿಯನ್ನುಂಟು ಮಾಡಿತು. ನಾವು ನಿಂತು ಮಾತನಾಡುವುದು ಬಹಳ ಅಪರೂಪ. ಹಾಗೆಂದು ಕುಳಿತು ಮಾತನಾಡುವುದರಲ್ಲಿ ಯಾವ ದೊಡ್ಡಸ್ತಿಕೆಯನ್ನೂ ನಾವು ಕಾಣುವುದಿಲ್ಲ. ಅದೊಂದು ಅಭ್ಯಾಸ ಬಲ. ನಮ್ಮ ಗುರುವರ್ಯರ ಕಾಲದಿಂದ ರೂಢಿಗತವಾಗಿ ಬಂದ ಒಂದು ಪದ್ಧತಿ. ಆತ್ಮೀಯರು ದಾರಿಯಲ್ಲಿ ಸಿಕ್ಕಾಗ ನಿಂತು ಮಾತನಾಡುವಂತೆ ಮನೆಗೆ ಬಂದಾಗ ನಿಂತೇ ಮಾತನಾಡುತ್ತಾರೆಯೇ? ಕುಳಿತು ಮಾತನಾಡುವುದಿಲ್ಲವೇ? ಅಯ್ಯೋ ನಿಂತೇ ಇದ್ದೀರಲ್ಲಾ, ಕುಳಿತುಕೊಳ್ಳಿ ಎನ್ನುವುದಿಲ್ಲವೇ?

ಸಾವನ್ನಪ್ಪುವ ಎರಡು ತಿಂಗಳ ಹಿಂದೆಯಷ್ಟೇ ಸಿ.ಜಿ.ಕೆಯವರಿಗೆ ಇದೇ ವೇದಿಕೆಯ ಮೇಲಿಂದ ನಮ್ಮ ಲಿಂಗೈಕ್ಯ ಗುರುಗಳವರ ಹೆಸರಿನಲ್ಲಿ ಸ್ಥಾಪಿಸಿರುವ ಶ್ರೀ ಶಿವಕುಮಾರ ಪ್ರಶಸ್ತಿಯನ್ನು ನಮ್ಮ ಕೈಯಿಂದಲೇ ಪ್ರದಾನ ಮಾಡಿದ ದೃಶ್ಯ ಕಣ್ಮುಂದೆ ಸುಳಿದಾಡಿತು. ಅಂದು ಸಿ.ಜಿ.ಕೆಯವರ ಪಕ್ಕದಲ್ಲಿ ಅವರ ಶ್ರೀಮತಿ ಜಯಲಕ್ಷ್ಮೀ ಸಹ ಆಸೀನರಾಗಿದ್ದರು. ಆದರೆ ಅದೇ ವೇದಿಕೆಯ ಮೇಲೆ ಹಿಂದೆ ಪುರಸ್ಕೃತರಾಗಿ ಕಂಗೊಳಿಸಿದ್ದ ಸಿ.ಜಿ.ಕೆ ಅಂದು ನಿರ್ಜೀವ ಶವವಾಗಿ ಮಲಗಿದ್ದರು. ಎಂತಹ ವಿಪರ್ಯಾಸ! ರಂಗಭೂಮಿಯ ಮೇಲೆ ನಾಟಕ ಕಂಪನಿಯ ಕಲಾವಿದರು ಸಾವಿನ ದೃಶ್ಯವನ್ನು ಅಭಿನಯಿಸುವಾಗ ಅತ್ಯಂತ ಉತ್ತಮವಾದ ಅಭಿನಯವನ್ನು ಮೆಚ್ಚಿ ಭಾವಪರವಶರಾದ ಪ್ರೇಕ್ಷಕರು ಚಪ್ಪಾಳೆ ತಟ್ಟಿ 'ಒನ್ಸ್

ಮೋರ್’ (once more) ಎಂದು ಕೂಗುತ್ತಾರೆ. ಆಗ ಸತ್ತಂತೆ ಅಭಿನಯಿಸಿದ ನಟ ಪ್ರೇಕ್ಷಕರ ಮೆಚ್ಚುಗೆಯಿಂದ ಪುಳಕಿತನಾಗಿ ಮೇಲೆದ್ದು ಮತ್ತೊಮ್ಮೆ ಅಭಿನಯಿಸಿದ ಉದಾಹರಣೆಗಳಿವೆ! ಅದೇ ರೀತಿ ಸಿ.ಜಿ.ಕೆ ಮತ್ತೆ ಮೇಲೆದ್ದು ಬರಬಾರದೇ? ಎಂದು ನಮ್ಮ ಹೃದಯ ತವಕಿಸುತ್ತಿತ್ತು! ಆದರೆ ಜೀವನವೆಂಬ ನಾಟಕದಲ್ಲಿ ಇದು ಸಾಧ್ಯವಿಲ್ಲ. ಈ ಜಗತ್ತೆಂಬ ರಂಗಮಂದಿರದಲ್ಲಿ ಎಲ್ಲರೂ ಪಾತ್ರಧಾರಿಗಳೇ! ಪಾತ್ರ ಮುಗಿದ ಮೇಲೆ ಬಣ್ಣ ಅಳಿಸಲೇ ಬೇಕು, ಅಂಕದ ಪರದೆ ಜಾರಿದ ಮೇಲೆ ನಾಟಕ ಮುಗಿಯಲೇ ಬೇಕು! ಸೂತ್ರಧಾರನಾದ ಭಗವಂತ ಆಡಿಸಿದಂತೆ ಆಡಿ ಪರದೆಯ ಹಿಂದಕ್ಕೆ ಹೋಗಲೇಬೇಕು. ನಾಟಕ ನೋಡಲು ಸೇರಿದ್ದ ಪ್ರೇಕ್ಷಕರೂ ರಂಗಮಂದಿರದಿಂದ ಆಚೆ ನಿರ್ಗಮಿಸಲೇ ಬೇಕು. ಅಲ್ಲಿಯೇ ಖಾಯಂ ಆಗಿ ಕುಳಿತುಕೊಂಡಿರಲು ಬರುವುದಿಲ್ಲ.

‘ಬಾಲ್ಯದಲ್ಲಿ ಚಾವಟಿ ಇಲ್ಲದೆ ಬುಗುರಿಯಾಡಿಸುವ ವಿದ್ಯೆಯನ್ನು ಕಲಿತಿದ್ದ’ ಸಿ.ಜಿ.ಕೆಯ ಶರೀರ ಚಾಟಿಯಿಂದ ಚಿಮ್ಮಿದ ಬುಗುರಿ ತಿರುಗುವಂತೆ ತಿರುಗಿ ತಿರುಗಿ ಕೊನೆಗೆ ನಿಷ್ಕ್ರಿಯವಾಗಿ ನೆಲದ ಮೇಲೆ ಉರುಳಿ ಬಿದ್ದಿತ್ತು. ‘ಕತ್ತಾಲೆ ಬೆಳದಿಂಗಳೊಳಗೆ’ ಅವರ ಆತ್ಮಚರಿತ್ರೆ. ಯಾರ ಆತ್ಮಚರಿತ್ರೆಯೇ ಆಗಲಿ ಜೀವನದ ಕೊನೆಯ ಪುಟಗಳನ್ನು ಬರೆಯಲು ಯಾರಿಂದಲೂ ಸಾಧ್ಯವಿಲ್ಲ. ರಂಗಭೂಮಿಯ ನೇಪಥ್ಯದಲ್ಲಿ ಸದಾ ರಂಗಕರ್ಮಿಗಳ ಮಧ್ಯೆ ಇರುತ್ತಿದ್ದ ಸಿ.ಜಿ.ಕೆಯವರಿಗೆ ಸಾವು ಬಂದೆರಗಿ ಶಿವಕುಮಾರ ಬಯಲು ರಂಗಮಂದಿರದ ಮುಂಭಾಗದಲ್ಲಿ ನಿತ್ಯ ನಿರಂತರವಾಗಿ ಕುಳಿತ ಮೂಕ ಪ್ರೇಕ್ಷಕನನ್ನಾಗಿಸಿತು. ಆದರೆ ಅವರ ಒಡಲಾಳದ ಆತ್ಮ ಮಾತ್ರ ರಂಗಜಂಗಮನಾಗಿ ನಾಡಿನ ಒಳಹೊರಗೆಲ್ಲಾ ರಂಗಭೂಮಿಯ ನೇಪಥ್ಯದಲ್ಲಿ ಅವರ ಒಡನಾಟವಿದ್ದ ಕಲಾವಿದರ ಮತ್ತು ರಂಗಕರ್ಮಿಗಳ ಹೃದಯಗಳಲ್ಲಿ ಸದಾ ಸುಳಿದಾಡುತ್ತಿದೆ!

6.1.2011

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑